**ಕರ್ನಾಟಕ ಸರ್ಕಾರ**
**(ತಾಂತ್ರಿಕ ಶಿಕ್ಷಣ ಇಲಾಖೆ)**

ಸಂಖ್ಯೆ:ಬಿಟಿಇ/01/ಇಎಪಿ/2013

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-1,
ದಿನಾಂಕ: 19/08/2013.

**: ಸುತ್ತೋಲೆ :**

ವಿಷಯ: 2013ನೇ ಸಾಲಿನ ಪೂರಕ ಪರೀಕ್ಷೆಗಳ ವಿದ್ಯಾರ್ಥಿಗಳ ಪಟ್ಟಿಯಲ್ಲಿ ವಿದ್ಯಾರ್ಥಿಯ ಹೆಸರು ತಂದೆಯ ಹಾಗೂ ತಾಯಿಯ ಹೆಸರುಗಳನ್ನು ವಿದ್ಯಾರ್ಥಿ ಪಟ್ಟಿಯಲ್ಲಿ (candidate List) ಸರಿಯಾಗಿ ನಮೂದಿಸಲು ಹಾಗೂ ಆಂತರಿಕ ಅಂಕಗಳನ್ನು ಪರಿಶೀಲಿಸಿದ ಪ್ರತಿಯನ್ನು ಕಳುಹಿಸಿಕೊಡುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಪರೀಕ್ಷಾ ಮಂಡಳಿಗೆ ಬಹುತೇಕ ವಿದ್ಯಾರ್ಥಿಗಳು ಅಂಕಪಟ್ಟಿಯಲ್ಲಿ ವಿದ್ಯಾರ್ಥಿಯ ಹೆಸರು, ತಂದೆಯ ಹೆಸರು ಹಾಗೂ ತಾಯಿಯ ಹೆಸರಿನ ತಿದ್ದುಪಡಿಗಾಗಿ ಅರ್ಜಿ ಸಲ್ಲಿಸುತ್ತಿರುವುದು ತಮಗೂ ಸಹ ತಿಳಿದಿರುವ ವಿಷಯವಾಗಿದೆ. ಆದ್ದರಿಂದ 2013ನೇ ಸಾಲಿನ ಪೂರಕ ಪರೀಕ್ಷೆಗೆ ಪರೀಕ್ಷೆ ಶುಲ್ಕ ಕಟ್ಟಿರುವ ವಿದ್ಯಾರ್ಥಿಗಳ ಪಟ್ಟಿಯಲ್ಲಿ ಸರಿಯಾಗಿ ವಿದ್ಯಾರ್ಥಿಯ ಹೆಸರು ತಂದೆಯ ಹೆಸರು ಹಾಗೂ ತಾಯಿಯ ಹೆಸರನ್ನು ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿಯ ಪ್ರಕಾರ ಆನ್‌ಲೈನ್ ನಲ್ಲಿ ಮುದ್ರಿಸಿ, ಸರಿಯಾಗಿದೆ ಎಂಬುದನ್ನು ಪ್ರಾಚಾರ್ಯರು ಪುನರ್ ಪರಿಶೀಲಿಸಿ ದೃಢೀಕರಿಸಲು ತಿಳಿಸಲಾಗಿದೆ.

ಆಂತರಿಕ ಅಂಕಗಳ ಪ್ರತಿ ಪುಟದಲ್ಲಿ ಪರಿಶೀಲಿಸಲು ಈ ಕಛೇರಿಯಿಂದ ಆಯಾ ಸಂಸ್ಥೆಗಳಿಗೆ ಉಪನ್ಯಾಸಕರನ್ನು ನಿಯೋಜಿಸಲಾಗುತ್ತಿದ್ದು, ಆಂತರಿಕ ಅಂಕಗಳನ್ನು ಪರಿಶೀಲಿಸಿ ದೃಢೀಕರಿಸಿದ ಪಟ್ಟಿಯಲ್ಲಿ ಅವರ ಹೆಸರು ಹುದ್ದೆಯ ವಿವರ ಮುಖ್ಯವಾಗಿ ಬೇಕಾಗಿದ್ದು, ಸ್ಪಷ್ಟವಾಗಿ ನಮೂದಿಸಲು ತಿಳಿಸಲಾಗಿದೆ. ಈ ಎರಡು ವಿಷಯಗಳ ಬಗ್ಗೆ ಪ್ರಾಚಾರ್ಯರು ವೈಯಕ್ತಿಕ ಗಮನ ಹರಿಸಲು ಸೂಚಿಸಲಾಗಿದೆ. ಇದರಲ್ಲಿ ಏನಾದರೂ ವ್ಯತ್ಯಾಸ ಕಂಡುಬಂದಲ್ಲಿ ಪ್ರಾಚಾರ್ಯರೇ ಜವಾಬ್ದಾರರಾಗಿರುತ್ತಾರೆ ಎಂದು ಈ ಪತ್ರದ ಮೂಲಕ ತಿಳಿಸಲಾಗಿದೆ.

ಕಾರ್ಯದರ್ಶಿ.
20-8-2013

ಇವರಿಗೆ,
ಎಲ್ಲಾ ಸಂಬಂಧಪಟ್ಟ ಪಾಲಿಟೆಕ್ನಿಕ್‌ಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
ಪ್ರತಿ: ಇ-ಗವರ್ನರ್ಸ್ ವಿಭಾಗಕ್ಕೆ (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
ರಿಜಿಸ್ಟ್ರರ್/ಆರ್.ಡಿ.ಎಂ.ಅಧೀಕ್ಷಕರು ಹಾಗೂ ಕಾರ್ಯನಿರ್ವಾಹಕರು.
ಕಾರ್ಯದರ್ಶಿಯವರ ಆಪ್ತ ಶಾಖೆ.
ಸಿಸ್ಟಂ ಅನಾಲಿಸ್ಟ್.